ಎರಡೆರಡು ತಾಲ್ಲೂಕುಗಳನ್ನು ನೋಡಿಕೊಳ್ಳಬೇಕೆಂದು ಹೇಳುತ್ತಾರೆ. ಇದೇ ಸಂದರ್ಭದಲ್ಲಿ ಮತ್ತೆ ನಾನು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. sufficient ಆಗಿ ಸಿಬ್ಬಂದಿಗಳನ್ನು ತುಂಬಿಕೊಳ್ಳುವಂತಹ ಕೆಲಸವನ್ನು ಮಾಡಿ. ಇಲ್ಲವಾದಲ್ಲಿ ನಿಯಂತ್ರಣ ಮಾಡುವುದಕ್ಕಾಗುವುದಿಲ್ಲ. ಪೊಲೀಸರಿಗೆ ಕೂಡ ಕಾನೂನಿನಲ್ಲಿ ಅವಕಾಶ ಮಾಡಿಕೊಟ್ಟಿದ್ದಾರೆ. ಅವರಿಗೂ ಕೂಡ ಅಧಿಕಾರವಿದೆ. ಮೊದಲು ಅವರಿಗೆ ಆ ಒಂದು ಅಧಿಕಾರವಿರಲಿಲ್ಲ. ಪೋಲಿಸರು ಯಾರೂ ಕೂಡ ನಿಯಂತ್ರಣ ಮಾಡುವುದಿಲ್ಲ. ಎಲ್ಲರೂ ಅವರ ಜೊತೆಗೆ ಶಾಮೀಲಾಗಿದ್ದಾರೆ. ಇಂತಹ ಕೆಲಸಗಳನ್ನು ಸರ್ಕಾರ ನಿಲ್ಲಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಇಷ್ಟು ಕೇಸ್ ಮದ್ಯವನ್ನು ಮಾರಾಟ ಮಾಡಬೇಕೆಂದು ಸರ್ಕಾರವೇ ನಿಗದಿ ಮಾಡಿದೆ. ಅರಸೀಕೆರೆ ತಾಲ್ಲೂಕಿನಲ್ಲಿ 27,500 ಕೇಸ್ ಮದ್ಯವನ್ನು ಮಾರಾಟ ಮಾಡಲೇಬೇಕು. ಇಲ್ಲವಾದರೆ ಸಂಬಳವನ್ನು cut ಮಾಡುತ್ತೇವೆಂದು ಹೇಳುತ್ತಾರೆ. ಪಾಪ, ಅವರೇನು ಮಾಡುತ್ತಾರೆ? ಈ ರೀತಿ ಅಕ್ರಮವಾಗಿ ತೆಗೆದುಕೊಂಡು ಹೋಗಿ ಮಾರುತ್ತಾರೆ. ಸರ್ಕಾರದ ತಪ್ಪಿಟ್ಟುಕೊಂಡು ಎಲ್ಲರನ್ನೂ ಬೈದರೆ ಆಗುತ್ತದೆಯೇ?

ಅಧ್ಯಕ್ಷರು : ಈ ವಿಷಯ ನನಗೂ ಕೂಡ ಬಹಳ ಚೆನ್ನಾಗಿ ಗೊತ್ತಿದೆ. ಅದಕ್ಕೆ ನಾನು ಮಾನ್ಯ ಸಚಿವರಿಗೆ ಈ ಸಂಬಂಧ ಒಂದು ವಿಶೇಷ ಕಾರ್ಯಕ್ರಮವನ್ನು ಹಾಕಿಕೊಳ್ಳುವಂತೆ ಹೇಳಿದ್ದೇನೆ. ಏಕೆಂದರೆ ವೈನ್ ಶಾಪ್‌ಗಳಲ್ಲಿ, ಚಿಲ್ಲರೆ ಅಂಗಡಿಗಳಲ್ಲಿ ಸಂಜೆ 6–7 ಗಂಟೆಗೆ ಹೋದರೆ ಕ್ಯೂ ನಿಂತಿರುತ್ತಾರೆ.

ಶ್ರೀ ಬಿ.ಆರ್.ಪಾಟೀಲ್ : ಟೀ ಕೊಡುವ ರೀತಿಯಲ್ಲಿ ಮದ್ಯವನ್ನು ಕೊಡುತ್ತಾರೆ. ಇದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಮನೆಗೆ ತೆಗೆದುಕೊಂಡು ಹೋಗಿ ಕುಡಿಯಬಹುದು.

(5) ವಿಷಯ : ಬೆಂಬಲ ಬೆಲೆಯೊಂದಿಗೆ ಕೊಬ್ಬರಿ ಖರೀದಿ ಮಾಡುವ ಬಗ್ಗೆ.

ಶ್ರೀ ಎಂ.ಟಿ.ಕೃಷ್ಣಪ್ಪ (ತುರುವೇಕೆರೆ) : ಮಾನ್ಯ ಅಧ್ಯಕ್ಷರೆ, ಕೊಬ್ಬರಿ ಬಗ್ಗೆ ತಮ್ಮ ಮುಖಾಂತರ ಸರ್ಕಾರಕ್ಕೆ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಕಾರಣವೇನೆಂದರೆ ಇಂದು ಅತ್ಯಂತ ಭೀಕರ ಬರಗಾಲ ಎದುರಾಗಿದೆ. ನಾನೂ

ಬಹಳಷ್ಟು–ನೋಡಿದ್ದೇನೆ. ಅದರಲ್ಲೇನೂ ವ್ಯಾಖ್ಯಾನ ಮಾಡಿಲ್ಲ. ಸಾವಿರಾರು, ಲಕ್ಷಾಂತರ ತೆಂಗಿನಮರ ಇವತ್ತು ಒಣಗಿ ಹೋಗಿವೆ. ಅತ್ಯಂತ ಭೀಕರ ಬರಗಾಲವಿದೆ. ಅದರ ಬಗ್ಗೆ ಕೂಡ ಈ ಸರ್ಕಾರ ಗಮನಹರಿಸಿಲ್ಲ. ಕೊಬ್ಬರಿ ಬೆಲೆ 5,300 ರೂಪಾಯಿಗಳಿದೆ. NAFED ತೆರೆಯಬೇಕೆಂದು ಸರ್ಕಾರ ಹೇಳಿದರೂ ಸಹ 4,200 ರೂಪಾಯಿಗಳಿಗೂ NAFED ತೆರೆದಿಲ್ಲ.

ಅಧ್ಯಕ್ಷರು : ಇನ್ನೂ open ಮಾಡಿಲ್ಲವೇ?

ಶ್ರೀ ಎಂ.ಟಿ.ಕೃಷ್ಣಪ್ಪ : ಇನ್ನೂ open ಮಾಡಿಲ್ಲ. ಅದಕ್ಕೆ NAFED ತೆರೆಯಬೇಕು. ಅದಕ್ಕೆ ಹೆಚ್ಚು ಹಣವನ್ನು ಕೊಡಬೇಕಾಗುತ್ತದೆ. ಅದನ್ನೇ ಲಕ್ಷಾಂತರ ಜನರು ನಂಬಿಕೊಂಡು ಜೀವನ ಮಾಡುತ್ತಿದ್ದಾರೆ. ಅದರ ಜೊತೆಗೆ ಬೇರೆ ಬೇರೆ ರಾಷ್ಟ್ರದಲ್ಲಿ ಕೇವಲ ಕೊಬ್ಬರಿ ಎಣ್ಣೆಗೆ ಮಾತ್ರ ಸೀಮಿತವಾಗಿಲ್ಲ. ಪಾಮ್‌ಆಯಿಲ್ ಅನ್ನು import ಮಾಡುವುದರಿಂದ ಅಲ್ಲಿ ಕೊಬ್ಬರಿ ಎಣ್ಣೆಗೆ ಬೆಲೆ ಸಿಗುವುದಿಲ್ಲ. ಹಾಗಾಗಿ ನೀರಾ ತೆಗೆಯುವುದರ ಮುಖಾಂತರ, ಬೇರೆ ಬೇರೆ ರಾಷ್ಟ್ರಗಳಲ್ಲಿ ನಮಗಿಂತ highest ಬೆಳೆಯುವಂತಹ ಇಂಡೋನೇಷಿಯ, ಶ್ರೀಲಂಕಾದಲ್ಲಿ ನಮಗಿಂತ ಹೆಚ್ಚು ಕೊಬ್ಬರಿ ಬೆಳೆದರೂ ಸಹ ಅವರಲ್ಲಿ ಬೆಲ್ಲ ತಯಾರು ಮಾಡುವಂತಹ ಒಂದು ಸ್ಕೀಮ್ ಮಾಡಿದ್ದಾರೆ. ಸಕ್ಕರೆ ತಯಾರು ಮಾಡುತ್ತಾರೆ. Highest export ಮಾಡಿ ಆರ್ಥಿಕವಾಗಿ ಆ ದೇಶ ಮುಂದುವರೆಯುತ್ತದೆ. ನಮ್ಮಲ್ಲಿ ಕೂಗಾಡಿದಾಗ NAFED ನಲ್ಲಿ ಹೆಚ್ಚು ಹಣವನ್ನು ಕೊಟ್ಟರೆ ತೃಪ್ತಿಯಾಗುವುದಿಲ್ಲ. ಈ ಒಂದು ಸ್ಕೀಮ್ ಅನ್ನು ಸರ್ಕಾರವೇ ಮಾಡಿಯೆಂದು ಹೇಳುವುದಿಲ್ಲ. ಆದರೆ ಇಡೀ ರಾಜ್ಯದಲ್ಲಿ Co-operative ಸೊಸೈಟಿ ಮುಖಾಂತರ technoligy ಯನ್ನು import ಮಾಡಿ ರೈತರಿಗೆ ಅನುಕೂಲ ಮಾಡಿಕೊಡಬೇಕು.

ಅಧ್ಯಕ್ಷರು : ನೀವು ಕೇಳಿದ ಪ್ರಶ್ನೆಯೇ ಬೇರೆ ಇಲ್ಲಿ ಹೇಳುವ ವಿಚಾರವೇ ಬೇರೆ. ನೀವೇನು ಹೇಳಿದ್ದೀರೆಂದರೆ ಉತ್ಪನ್ನಗಳ ಬೆಲೆಯು ಕುಸಿದಿದ್ದು, NAFED ಮೂಲಕ ಖರೀದಿಸುವುದರ ಹಾಗೂ ಪರಿಹಾರವನ್ನು ನೀಡುವ ಬಗ್ಗೆ ಇದೆ.

ಶ್ರೀ ಎಂ.ಟಿ.ಕೃಷ್ಣಪ್ಪ : ಅದರ ಬಗ್ಗೆ ಒಂದೆರಡು add ಮಾಡಿಕೊ–ಳ್ಳುತ್ತೇನೆ. ತೊಂದರೆಯೇನಿಲ್ಲ. ಸರ್ಕಾರ ರೈತರಿಗೆ ಕೇವಲ 500–1,000

ರೂಪಾಯಿಗಳನ್ನು ಕೊಟ್ಟರೆ ಆಗುವುದಿಲ್ಲ. ಅದರ ಉತ್ಪನ್ನವನ್ನು ಮಾಡಿ ಏನಾದರೊಂದು export ಮಾಡುವಂತಹ ಕ್ರಮ ಆಗಬೇಕು.

ಅಧ್ಯಕ್ಷರು: ಈ ವಿಷಯ ಇಲ್ಲಿ ಇಲ್ಲ. ನೀವು ಪ್ರಸ್ತಾಪಿಸುತ್ತಿರುವ ಪ್ರಶ್ನೆಯೇ ಬೇರೆ. ಬೇರೆ ಸಂದರ್ಭದಲ್ಲಿ ಚರ್ಚೆ ಮಾಡಿ.

ಶ್ರೀ ಎಂ.ಟಿ.ಕೃಷ್ಣಪ್ಪ : ನಿಯಮ 69ರಲ್ಲಿ ಚರ್ಚೆ ಮಾಡುತ್ತೇನೆ.

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ : ಈ ಬಗ್ಗೆ ಬಹಳ detail ಆಗಿ ಹೇಳಿ benefit ತೆಗೆದುಕೊಳ್ಳಬೇಕಾಗಿದೆ.

ಅಧ್ಯಕ್ಷರು : ಶ್ರೀ ಎಂ.ಟಿ.ಕೃಷ್ಣಪ್ಪ ರವರದು ಮತ್ತೊಂದು ಮರಳಿನ ವಿಷಯವಿದ್ದು, ಇದನ್ನು ಇನ್ನೊಂದು ದಿವಸ ಪ್ರಸ್ತಾಪಿಸೋಣ.

(6) ವಿಷಯ : ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯಡಿ ಕೈಗೊಳ್ಳಲಾದ ಕಾಮಗಾರಿಗಳ ಬಗ್ಗೆ.

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ) : ಮಾನ್ಯ ಅಧ್ಯಕ್ಷರೆ, ಹೇಳಿಕೆಯನ್ನು ಕೊಡುವುದಕ್ಕೆ ಮಾನ್ಯ ಮಂತ್ರಿಗಳೇ ಇಲ್ಲ.

ಅಧ್ಯಕ್ಷರು : ನೀವು ಹೇಳಿ ಅವರು ಹೇಳಿಕೆಯನ್ನು ಕೊಟ್ಟಿರುತ್ತಾರೆ.

ಶ್ರೀ ಹೆಚ್.ಡಿ.ರೇವಣ್ಣ : ಒಂದು ಪ್ರತಿಯನ್ನು ಕೊಟ್ಟಿಲ್ಲ. ಪ್ರತಿಯನ್ನು ಕೊಟ್ಟರೆ ಹೇಳುತ್ತೇನೆ.

ಅಧ್ಯಕ್ಷರು : ಶ್ರೀ ಹೆಚ್.ಡಿ.ರೇವಣ್ಣ, ಶ್ರೀ ಹೆಚ್.ಡಿ.ಕುಮಾರಸ್ವಾಮಿ, ಶ್ರೀ ಹೆಚ್.ಎಸ್.ಪ್ರಕಾಶ್, ಶ್ರೀ ಕೆ.ಎಂ.ಶಿವಲಿಂಗೇಗೌಡರು, ಎಲ್ಲರೂ ಇದ್ದಾರೆ.

ಶ್ರೀ ಹೆಚ್.ಡಿ.ರೇವಣ್ಣ : ನಾವು ಸುಮಾರು 6–7 ಜನ ಸದಸ್ಯರು ಕೊಟ್ಟಿದ್ದೇವೆ. ಮೊದಲು ಮಾನ್ಯ ಮಂತ್ರಿಗಳೂ ಅದೇನು ಹೇಳಿಕೆಯನ್ನು ಕೊಡುತ್ತಾರೋ ಕೊಡಲಿ ನಂತರ clarification ಕೇಳುತ್ತೇವೆ. ಇದು ಬಹಳ ಮುಖ್ಯವಾದ ವಿಷಯವಾಗಿರುವುದರಿಂದ ಮಂತ್ರಿಗಳನ್ನು ಕರೆಸಿ.State Highway ಗೆ second package ನಲ್ಲಿ ಕರೆದಿದ್ದಾರೆ. 1,498 ಕೋಟಿ ರೂಪಾಯಿಗಳಿಗೆ ಟೆಂಡರ್ ಕರೆದಿದ್ದು, ಕಳೆದ ತಿಂಗಳ 23ನೇ ತಾರೀಖು ಕೊನೆಯ ದಿನಾಂಕ. ಇಲ್ಲಿಯವರೆಗೆ ಏನಾಗಿದೆ? ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡುತ್ತಾರೆ? ಇನ್ನೇನು ಮಳೆಗಾಲ ಪ್ರಾರಂಭವಾಗುತ್ತದೆ. ಟೆಂಡರ್